ಕಬ್ಬಿನ ಬೆಲೆ

2 (95) ಶ್ರೀ ಅಪ್ಪಾಜಿ @ ಚೆನ್ನಬಸವರಾಜ್ ಶಂಕರ್‌ರಾವ್ ನಾಡಗೌಡ (ಮುದ್ದೇಬಿಹಾಳ್) ಮಾನ್ಯ ಸಣ್ಣ ಕೈಗಾರಿಕೆಗಳ, ಮುಜರಾಯಿ ಮತ್ತು ಸಕ್ಕರೆ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ಉತ್ತರಿಸುವರೇ?

ಅ) ರಾಜ್ಯದಲ್ಲಿ ರೈತರು ಬೆಳೆದ ಕಬ್ಬನ್ನು ಕಾರ್ಖಾನೆಗೆ ಪೂರೈಸಿದ ಮೇಲೆ ಒಂದು ಟನ್ ಕಬ್ಬಿಗೆ ಸರ್ಕಾರವು ನಿಗದಿಪಡಿಸಿರುವ ವೈಜ್ಞಾನಿಕ ಬೆಲೆ ಎಷ್ಟು,

ಆ) ಸಕ್ಕರೆ ಕಾರ್ಖಾನೆಯವರು ರೈತರು ಬೆಳೆದಂತಹ ಕಬ್ಬನ್ನು ಪಡೆದು ಸದರಿ ರೈತರಿಗೆ ಹಣವನ್ನು ನೀಡದಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ,

ಇ) ಹಾಗಿದ್ದಲ್ಲಿ, ರೈತರಿಗೆ ಬರಬೇಕಾದ ಬಾಕಿಯನ್ನು ನೀಡಲು ಸರ್ಕಾರ ಕೈಗೊಂಡ ಕ್ರಮಗಳೇನು? (ವಿವರ ನೀಡವುದು)

ಶ್ರೀ ಪ್ರಕಾಶ್ ಬಿ.ಪುಕಳೆರಿ ಮಾನ್ಯ ಸಣ್ಣ ಕೈಗಾರಿಕೆಗಳ, ಮುಜರಾಯಿ ಮತ್ತು ಸಕ್ಕರೆ ಸಚಿವರು

ಅ) 2013–14ನೇ ಸಕ್ಕರೆ ಹಂಗಾಮು ಅಕ್ಟೋಬರ್–2013 ರಿಂದ ಪ್ರಾರಂಭವಾಗಿದ್ದು ಸಕ್ಕರೆ ಕಾರ್ಖಾನೆಗಳು ಪ್ರತಿ ಮೆಟನ್‌ಗೆ ರೂ 2500/– ರಂತೆ ಪಾವತಿಸಲು ಕಬ್ಬು ನಿಯಂತ್ರಣ ಮಂಡಳಿ ನಿಗದಿಪಡಿಸಿದೆ

ಆ) ಗಮನಕ್ಕೆ ಬಂದಿದೆ.

ಇ) ಕಾರ್ಖಾನೆಗಳು ಉಳಿಸಿಕೊಂಡಿರುವ ಬಾಕಿ ಮೊತ್ತವನ್ನು ಕೂಡಲೇ ಪಾವತಿಸಲು ಕಾರ್ಖಾನೆಗಳಿಗೆ ಈಗಾಗಲೇ ನೋಟೀಸ್ ನೀಡಲಾಗಿದೆ ಆದರೂ ಬಾಕಿ ಉಳಿಸಿಕೊಂಡಲ್ಲಿ ಕಬ್ಬು ನಿಯಂತ್ರಣ ಆದೇಶ 1966ರ ಕಲಂ 3(8)ರ ಪ್ರಕಾರ ಭೂ ಅಂದಾಜು ಬಾಕಿ ಎಂದು ಪರಿಗಣಿಸಿ ಬಾಕಿಯನ್ನು ವಸೂಲು ಮಾಡಲು ಕ್ರಮವಹಿಸಲಾಗುವುದು.